ಅವರು ನಿನ್ನನ್ನು ಎಲ್ಲಿ ಇಟ್ಟಿದ್ದಾರೆ ಅಂತ ಗುರುತಿಸು.' ನಾನು ಅಂಚೆಯಣ್ಣನನ್ನು ಕಾಯಲಿಲ್ಲ. ಅವರು ಯಾರೂ ನನ್ನನ್ನು ಕರೆಯುವುದಿಲ್ಲ ಎಂಬ ಅರಿವು ನನಗೂ ಇತ್ತು.

★★★

ನಾನು ಶಾಶ್ವತವಾದ ಸತ್ಯವೊಂದರ ಬೆನ್ನು ಬಿದ್ದೆ. ಯಾಕೆ ಹೀಗೆ ಮುಗ್ಧತೆಯನ್ನು ಕಳೆದು ಕೊಂಡು ಬಿಡ್ತೀವಿ? ಯಾಕೆ ಜನ ಸಣ್ಣಪುಟ್ಟ ಕಾರಣಗಳನ್ನೇ ದೊಡ್ಡದು ಮಾಡಿಕೊಂಡು ಕಂದಕಗಳನ್ನೇ ಸೃಷ್ಟಿಸಿಬಿಡ್ತಾರೆ? ಯಾರ ತಪ್ಪು ಇದು?

ನನಗೆ ಥಟ್ಟನೆ ನೆನಪಾಯಿತು. ಆಗ ಕಾಲೇಜಿನ ಆಡಳಿತ ಮಂಡಳಿಗೂ ಕಾಲೇಜಿನ ಲೆಕ್ಚರರ್ ಆಗಿದ್ದ ನನ್ನ ಅಣ್ಣನಿಗೂ ತೀವ್ರ ಮನಸ್ತಾಪವಿದ್ದ ಕಾಲ. ಆಗೆಲ್ಲ ತಿಂಗಳಾನುಗಟ್ಟಲೇ ಅವನಿಗೆ ಸಂಬಳವೇ ಬರುತ್ತಿರಲಿಲ್ಲ. ತೀರಾ ಖಿನ್ನನಂತೆ ಕಾಣುತ್ತಿದ್ದ. ಆದರೂ, ಏನೂ ಹಂಚಿಕೊಳ್ಳುತ್ತಿರಲಿಲ್ಲ. ನನಗೂ ಅಂಥ ಸ್ಥಿತಿ ಕಂಡು ಕಸಿವಿಸಿ, ಕಳವಳ ಉಂಟಾಗುತ್ತಿತ್ತು. ಪ್ರಾಸಂಗಿಕವಾಗಿ, ನನ್ನ ಕಚೇರಿಯ ಕಾರ್ಯಕ್ರಮಕ್ಕೆ ಬಂದಿದ್ದ ಸ್ಥಳೀಯ ಶಾಸಕರೊಡನೆ ಈ ವಿಷಯ ಪ್ರಸ್ತಾಪಿಸಿದ್ದೆ. ತುಂಬಾ ಡಿಪ್ರೆಷನ್‌ನಲ್ಲಿದ್ದಾನೆ ಸಾಧ್ಯವಾದರೆ ಏನಾದರೂ ಮಾಡಿ ಅಂದೆ. ಹೌದಾ, ನಾನು ಮಾತಾಡ್ತೀನಿ ಬಿಡಿ ಅಂದರು. ಅವರು ಏನು ಮಾತಾಡಿದರೋ ಏನೋ, ಕಾಲ ಕ್ರಮೇಣ ನನಗೂ ಆ ವಿಷಯ ಮರೆತೇ ಹೋಯ್ತು.

ಮುಂದೊಂದು ದಿನ, ಬಲವಂತವಾಗಿ ಇವಳನ್ನು ಹೊರಡಿಸಿಕೊಂಡು ತಿಪಟೂರಿಗೆ ಹೋದೆ. ಯಾಕೋ ಎಲ್ಲರೂ ಮುಗುಂ ಆಗಿಯೇ ಇದ್ದರು. ಕಡೆಗೂ ನನ್ನ ತಂಗಿಯಿಂದ ವಿಷಯ ಹೊರಗೆ ಬಂತು.

'ನೀನು ರಾಜಂಗೆ ಹುಚ್ಚು ಹಿಡಿದಿದೆ, ಮೈ ಮೇಲಿನ ಬಟ್ಟೆ ಎಲ್ಲಾ ಹರ್ಕೋತಾನೆ ಎಂದ್ಯಂತೆ.'

ನಾನು ಕಾಳಜಿಯಿಂದ, ಒಳ್ಳೆಯ ದೃಷ್ಟಿಯಿಂದ ಮಾಡಿದ್ದು, ಎಷ್ಟು ಅವಲಕ್ಷಣದ ಸ್ವರೂಪ ಪಡೆದಿದೆ ಎಂದು ಅರಿವಾಯಿತು. ಏನೇ ಸಮಜಾಯಿಷಿ ಕೊಟ್ಟರೂ, ಯಾರೂ ನನ್ನನ್ನು ನಂಬುವ ಸ್ಥಿತಿಯಲ್ಲೇ ಇರಲಿಲ್ಲ.

ಆಗಲೂ ನಾಗಣ್ಣ ದೇವರ ಹಾಗೆಯೇ ಇದ್ದ. 'ಯಾಕೆ ಬೇಜಾರು ಮಾಡ್ಕೊತೀಯ ಬಿಡು, ಎಲ್ಲಾ ಸರಿಯಾಗುತ್ತದೆ. ಸ್ವಲ್ಪ ಕಾಫಿ ಕುಡೀತೀಯಾ' ಅಂದ. ನಾನು ತಲೆಯಲ್ಲಾಡಿಸಿದೆ. ಆದರೆ ಅವನು ಬಿಡಲೇ ಇಲ್ಲ, ಸ್ವಲ್ಪ ಹೊತ್ತಿನಲ್ಲೇ ಬಿಸಿ ಕಾಫಿ ಹಿಡಿದು ಪ್ರತ್ಯಕ್ಷನಾಗೇ ಬಿಟ್ಟ.

'ನೋಡು, ಎಂಥ ಅನಾಹುತವಾಗಿದೆ. ನೀನು ಶಾಸಕರನ್ನೇ ಕೇಳು, ನಿಜವಾಗಲೂ ನಾನು ಹುಚ್ಚು ಹಿಡಿದಿದೆ ಅಂದೆನಾ ಸಾರ್' ಅಂತ. ಇವಳು ಹಲವು ಬಾರಿ ಹೇಳಿದಳು. ನಾನು ಇಡೀ ಪ್ರಕರಣವನ್ನೇ ದ್ವೇಷಿಸಿದೆ. ಎಷ್ಟೋ ಬಾರಿ ಶಾಸಕರಿಗೆ ಫೋನ್ ಮಾಡಿದೆನಾದರೂ ಅವರು ಸ್ವೀಕರಿಸಲೇ ಇಲ್ಲ. ನಾನು ಆಗಲೇ ತಿಪಟೂರಿನ ಸಂಬಂಧದಿಂದ ಮಾನಸಿಕವಾಗಿ ದೂರವಾಗಿದ್ದೆ. ಈಗ ದೈಹಿಕವಾಗಿಯೂ ದೂರವಾದೆ. ಎಷ್ಟೇ ಒಳ್ಳೆಯವನಾಗಿದ್ದರೂ, ನಾನು ಸೂಕ್ಷ್ಮಮತಿಯಾಗಲೇ ಇಲ್ಲ.

ಅವಳು ಹೇಳಿದಂತೆ, ನಮ್ಮ ಮೇಲಿನ ಬಹಿಷ್ಕಾರ ಮತ್ತಷ್ಟು ಉಗ್ರವಾಗಿ ಮುಂದುವರೆಯಿತು. ಅದೇ ಊರಿಗೆ ಆಫೀಸ್ ಕೆಲಸದ ಮೇಲೆ ಹೋದರೂ, ಮನೆಯ ದಾರಿ ಕಡೆ ಅಪ್ಪಿ ತಪ್ಪಿಯೂ ನನ್ನ ಕಾರು ಹೊರಳುತ್ತಿರಲಿಲ್ಲ. ಒಂದು ಬಾರಿ ಅನಿರೀಕ್ಷಿತವಾಗಿ ಪೇಟೆ ಬೀದಿಯಲ್ಲಿ ನಾಗಣ್ಣ ಕಂಡರೂ, ಧಿಮಾಕಿನಿಂದ ಕಾರು ನಿಲ್ಲಿಸದೇ ಬಂದು ಬಿಟ್ಟಿದ್ದೆ. ನನ್ನನ್ನು ಗುರುತಿಸಿಯೋ ಏನೋ, ಅವನು ಮಾತನಾಡಿಸಲು ಎತ್ತಿದ ಕೈ ಈಗಲೂ ನೆನಪಾಗುತ್ತಿದೆ.